

بسم اللهِ الرّحمٰن الرّحيم

# ಯು.ಕೆ. ಜಲ್ಸ ಸಾಲಾನ 2021. ಕೃತಜ್ಞತೆ – ಅಭಿನಂದನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13–08–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್‌ಹಮ್‌ದುಲಿಲ್ಲಾಹ್ ಬ್ರಿಟನಿನ ಜಲ್ಸಾ ಸಾಲಾನ ಎರಡು ವರ್ಷಗಳ ನಂತರ ಕಳೆದ ಶುಕ್ರವಾರ ದಿನ ಪ್ರಾರಂಭವಾಗಿ ಮೂರು ದಿನಗಳ ತನಕ ತನ್ನ ಆಧ್ಯಾತ್ಮಿಕ ಪರಿಸರದ ದೃಶ್ಯಗಳನ್ನು ತೋರಿಸುತ್ತಾ ಕಳೆದ ರವಿವಾರ ಮುಕ್ತಾಯವಾಯಿತು. ಕೊರೋನ ರೋಗದ ಹಾವಳಿಯ ಕಾರಣದಿಂದ ಈ ವರ್ಷ ಸಹ ಪರಿಸ್ಥಿತಿಗಳು ಅನುಕೂಲವಾಗಿರಲಿಲ್ಲ. ಈ ವರ್ಷ ಸಹ ಜಲಸ ಸಮಾವೇಶ ನಡೆಸಲು ಸಾಧ್ಯವಾಗದೆಂದು ವ್ಯವಸ್ಥಾಪಕರು ಭಾವಿಸುತ್ತಿದ್ದರು. ಇನ್‌ಶಾ ಅಲ್ಲಾಹ್ ಈ ವರ್ಷ ಜಲ್ಸ ನಡೆಸಲಾಗುವುದೆಂದು ಅವರೊಂದಿಗೆ ಹೇಳಲಾಯಿತು. ಜಲ್ಸದ ವ್ಯವಸ್ಥೆ ಮಾಡುವವರು ಜಲ್ಸ ಜರಗಿಸಲು ಪ್ರಾರಂಭಿಸಿದರೂ ಅವರು ಪೂರ್ಣವಾದ ಆತ್ಮಸಂತೃಪ್ತಿಯಿಂದ ಸಿದ್ಧತೆಗಳನ್ನು ಮಾಡುತ್ತಿರಲಿಲ್ಲ. ಆದುದರಿಂದ ಒಂದು ಸಂದರ್ಭದಲ್ಲಿ ನಾನು ಕಟುವಾಗಿ ಹೇಳಬೇಕಾಯಿತು. ಜಲ್ಸ ಜರಗುವುದೋ ಇಲ್ಲವೋ ಎಂದು ಯೋಚಿಸಿ ನೀವು ಹೃತ್ಪೂರ್ವಕವಾಗಿ ಕೆಲಸವನ್ನು ಮಾಡುವುದಿಲ್ಲವಾದರೆ ನಾನು ಜಲ್ಸ ಜರಗಿಸಲು ಹೊಸ ವ್ಯವಸ್ಥಾಪಕರನ್ನು ನೇಮಿಸುತ್ತೇನೆ. ನನ್ನ ಈ ಮಾತುಗಳು ಅವರನ್ನು ಬಡಿದೆಬ್ಬಿಸಿದುವು. ಅವರು ವೇಗವಾಗಿ ಕೆಲಸ ಮಾಡಲು ತೊಡಗಿದರು. ಕಾರ್ಯಕರ್ತರು ಜಲ್ಸದ ವಾಸ್ತವಿಕ ಕಾರ್ಯ ನಿರ್ವಾಹಕರಾಗಿದ್ದಾರೆ. ಅವರು ಸೇವೆ ಮಾಡಲು ಬಹಳ ಆಸಕ್ತರಾಗಿದ್ದರೆಂದು ತೋರುತ್ತದೆ. ಆದುದರಿಂದ ಪ್ರತಿಯೊಂದು ಕಡೆಯಿಂದಲೂ ಸ್ವಯಂ ಸೇವಕರು ದೊರಕಲು ಪ್ರಾರಂಭವಾಯಿತು. ಆದರೆ ಜಲ್ಸ ಚಿಕ್ಕ ಪ್ರಮಾಣದಲ್ಲಿ ಜರಗಿಸಲು ನಿಶ್ಚಯಿಸಿರುವುದರಿಂದ ಅಪೇಕ್ಷೆ ಸಲ್ಲಿಸಿದ ಸ್ವಯಂ ಸೇವಕರಿಂದ ಕಾರ್ಯಕರ್ತರನ್ನು ಆಯ್ಕೆ ಮಾಡಲಾಯಿತು. ಆದರೆ ಯಾರಿಗೆ ಸೇವೆ ಮಾಡಲು ಸಂದರ್ಭ ಲಭಿಸಲಿಲ್ಲವೋ ಅಂತಹ ಸ್ವಯಂ ಸೇವಕರೊಂದಿಗೆ ನಾನು ಹೇಳಲು ಬಯಸುತ್ತೇನೆ: ನಿಮಗೆ ಸಕಾರಣವಾಗಿ ಸೇವೆ ಮಾಡಲು ಸಂದರ್ಭ ಲಭಿಸದಿದ್ದರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಮಾಡಲು ನಿಮಗಿರುವ ಸಂಕಲ್ಪ ಈಡೇರಿದೆ. ನಿಮಗೆ ಅದಕ್ಕೋಸ್ಕರ ಸಿಗುವ ಪ್ರತಿಫಲದಿಂದ ನಿಮ್ಮನ್ನು ವಂಚಿತರನ್ನಾಗಿ ಅಲ್ಲಾಹನು ಮಾಡಲಾರನು.

ಜಲ್ಸ ಮುಕ್ತಾಯಗೊಂಡ ನಂತರದ ಪ್ರಥಮ ಜುಮುಅದಲ್ಲಿ ಜಲ್ಸದ ಕಾರ್ಯಕರ್ತರಿಗೂ ಸ್ವಯಂ ಸೇವಕರಿಗೂ ಕೃತಜ್ಞತೆಯನ್ನು ನನ್ನ ರೂಢಿ ಪ್ರಕಾರ ಅರ್ಪಿಸುತ್ತೇನೆ. ಲೋಕದಾದ್ಯಂತ ಜನರು ನನಗೆ ಪತ್ರಗಳನ್ನು ಬರೆದು ಸ್ವಯಂ ಸೇವಕರಿಗೆ ಕೃತಜ್ಞತೆ ಅರ್ಪಿಸುತ್ತಿದ್ದಾರೆ. ಮಳೆ ಮತ್ತು ಕೆಸರಿನ ಕಾರಣ ಪಾರ್ಕಿಂಗ್ ವ್ಯವಸ್ಥೆಯಲ್ಲಿ ಸಮಸ್ಯೆಗಳು ತಲೆದೋರಿದ್ದುವು. ವಾಹನಗಳನ್ನು ಕೆಸರಿನಿಂದ ಎತ್ತುವಾಗ ಕಾರ್ಯಕರ್ತರು ಮತ್ತು ಸ್ವಯಂ ಸೇವಕರು ಕೆಸರಿನಿಂದ ಆವೃತರಾದುದನ್ನು ಎಂ.ಟಿ.ಎ. ಮೂಲಕ ಲೋಕದಾದ್ಯಂತ ಜನರು ನೋಡಿದರು. ಸೇವಾ ನಿರತರ ಈ ಮನೋಭಾವದ ಬಗ್ಗೆ ನಮ್ಮವರು ಮತ್ತು ಅನ್ಯರು ಬಹಳ ಆಶ್ಚರ್ಯವನ್ನು ಪ್ರಕಟಿಸಿದರು. ನೈರ್ಮಲ್ಯ ವಿಭಾಗ, ಆಹಾರ ಸರಬರಾಜು, ಆಹಾರ ಬೇಯಿಸುವಿಕೆ ಮತ್ತು ಜಲ್ಸದ ಅತ್ಯಂತ ಮಹತ್ವಪೂರ್ಣವಾದ ಕೆಲಸವಾದ ಮಾರ್ಕಿಗಳ (ಡೇರೆಗಳ) ನಿರ್ಮಾಣ, ರಸ್ತೆ ನಿರ್ಮಾಣ ಮೊದಲಾದ ಕೆಲಸಗಳನ್ನು ಮಾಡಲು ಸ್ವಯಂ ಸೇವಕರು ನಿರಂತರವಾಗಿ ಅನೇಕ ವಾರಗಳ ಕಾಲ ಆಗಮಿಸುತ್ತಾ ಇದ್ದರು. ಈಗ ಜಲ್ಸದ ವ್ಯವಸ್ಥೆಯನ್ನು ಮುಕ್ತಾಯಗೊಳಿಸಲು ಸಹ ಅನೇಕ ದಿನಗಳ ಕಾಲ ಸ್ವಯಂ ಸೇವಕರು ಕಾರ್ಯನಿರತರಾಗಬೇಕಾಗುತ್ತದೆ. ಎಂ.ಟಿ.ಎ. ಬಹಳ ಪರಿಶ್ರಮಪಟ್ಟು ಕಾರ್ಯಕ್ರಮಗಳನ್ನು ಬಿತ್ತರಿಸಿದರು. ಅವರು ಜಲ್ಸವನ್ನು ತೋರಿಸಿದರಲ್ಲದೆ ವಿವಿಧ ದೇಶಗಳಲ್ಲಿ ಜನರು ಜಮಾಯಿಸಿ ಜಲ್ಸದ ಕಾರ್ಯಕ್ರಮಗಳನ್ನು ವೀಕ್ಷಿಸುವುದನ್ನು ಸಹ ತೋರಿಸಿ ಅವರು ವೈಭವಶಾಲಿ ಅಂತರ್‍ರಾಷ್ಟ್ರೀಯ ಭವನದ ಚಿತ್ರ ಪ್ರದರ್ಶಿಸಿದರು. ಹೀಗೆ ಅನಾನುಕೂಲ ಪರಿಸ್ಥಿತಿಯಲ್ಲಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದ ಎಲ್ಲ ಕಾರ್ಯಕರ್ತರಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ.

ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸಿದ ನಂತರ ನಾನು ಸಾಮಾನ್ಯವಾಗಿ ವಿವರಿಸುವ ವಿಷಯವನ್ನು ಮುಂದುವರಿಸಲು ನಾನು ಇಚ್ಛಿಸಿದ್ದೆ. ಆದರೆ ಲೋಕದಾದ್ಯಂತ ಜಲ್ಸವನ್ನು ವೀಕ್ಷಿಸಿ ಆಲಿಸಿದ ಜನರು ಅನಿಸಿಕೆಗಳನ್ನು ಮತ್ತು ಭಾವನೆಗಳನ್ನು ಅಸಾಧಾರಣವಾಗಿ ಪ್ರಕಟಿಸಿದುದರಿಂದ ನಾನು ಹಿಂದೆ ಯಾವಾಗಲೂ ವಿವರಿಸುತ್ತಿದ್ದ ಹಾಗೆ ಇಂದಿನ ಖುತ್‌ಬದಲ್ಲಿ ಅವರ ಅಭಿಪ್ರಾಯಗಳನ್ನು ಮತ್ತು ಅನುಗ್ರಹಗಳನ್ನು ವಿವರಿಸಬೇಕೆಂದು ಇಚ್ಛಿಸುತ್ತೇನೆ.

ಈ ವರ್ಷದ ಅಪರೂಪ ರೀತಿಯ ವ್ಯವಸ್ಥೆಯಲ್ಲಿ ಜರಗಿಸಲಾದ ಜಲ್ಸವು ಅಲ್ಲಾಹನ ಅನುಗ್ರಹಗಳ ಎಂತಹ ಬಾಗಿಲುಗಳನ್ನು ತೆರೆಯಿತೆಂದರೆ ಅವುಗಳ ಬಗ್ಗೆ ಕೃತಜ್ಞತೆ ಅರ್ಪಿಸುತ್ತಾ ಅಲ್ಲಾಹನ ಮುಂದೆ ಮನುಷ್ಯನು ಬಾಗುತ್ತಾ ಇರಬೇಕಾಗಿದೆ. ಎಂತೆಂತಹ ಅನುಗ್ರಹಗಳನ್ನು ಅಲ್ಲಾಹನು ಜಮಾಅತಿನ ಮೇಲೆ ಸುರಿಸಿದನು. ಇವೆಲ್ಲ ಇದ್ದರೂ ಒಂದು ಕೊರತೆ ಬಗ್ಗೆ ಸಾಮಾನ್ಯವಾಗಿ ಜನರು ಹೇಳುತ್ತಿದ್ದಾರೆ. ಈ ವರ್ಷ ಆಲಮೀ ಬೈಅತ್ ನಡೆಯಲಿಲ್ಲ. ಅದರ ಬಗ್ಗೆ ಅವರಿಗೆ ಬಹಳ ಪ್ರತೀಕ್ಷೆ ಇತ್ತು. ಆದರೆ ಆಲಮೀ ಬೈಅತ್ ವ್ಯವಸ್ಥೆ ಮಾಡುವುದು ಕಷ್ಟಕರವಾಗಿತ್ತು.

ಈ ವರ್ಷ ಪ್ರಥಮ ಸಾರಿ ಲೈವ್ ಸ್ಟ್ರೀಮಿಂಗ್ ಮುಖಾಂತರ ವಿವಿಧ ಜಮಾಅತ್‌ಗಳು ತಮ್ಮ ಸ್ಥಳಗಳಲ್ಲಿಯೇ ಕುಳಿತುಕೊಂಡು ಜಲ್ಸದಲ್ಲಿ ಭಾಗವಹಿಸಿದುವು. ಯು.ಕೆ.ಯಲ್ಲಿ ಐದು ಸ್ಥಳಗಳಲ್ಲಿ ಈ ವ್ಯವಸ್ಥೆ ಮಾಡಲಾಗಿತ್ತು. ಬೇರೆ ಇಪ್ಪತ್ತೆರಡು ದೇಶಗಳ ಮೂವತ್ತೇಳು ಸ್ಥಳಗಳಲ್ಲಿ ಈ ವ್ಯವಸ್ಥೆ ಮೂಲಕ ಜನರು ಜಲ್ಸದಲ್ಲಿ ಭಾಗವಹಿಸಿದರು. ಈ ದೇಶಗಳಲ್ಲಿ ಅಮೇರಿಕ, ಕೆನಡ, ಆಸ್ಟ್ರೇಲಿಯಾ, ಇಂಡೋನೇಶಿಯಾ, ಬಂಗ್ಲಾದೇಶ, ಮೌರಿಶಸ್, ಕಬಾಬೀರ್, ಭಾರತ ಬರ್ಕಿನೋ ಫಾಸೋ, ಘಾನ, ನೈಜೀರಿಯಾ, ಗ್ಯಾಂಬಿಯಾ, ತೆನ್‌ಝಾನಿಯಾ, ಫ್ರಾನ್ಸ್, ಸ್ವಿಝರ್‌ಲೇಂಡ್, ಜರ್ಮನಿ, ಸ್ವೀಡನ್, ಬೆಲ್‌ಜಿಯಂ, ಫಿನ್‌ಲ್ಯಾಂಡ್, ಹಾಲೆಂಡ್ ಮೊದಲಾದುವು ಸೇರಿವೆ. ಒಂದು ಅಂದಾಜು ಪ್ರಕಾರ ಮಹಿಳೆಯರನ್ನು ಉದ್ದೇಶಿಸಿ ಮಾಡಿದ ಭಾಷಣವನ್ನು ಮೂವತ್ತು ಮೂವತ್ತೈದು ಸಾವಿರ ಮಹಿಳೆಯರು ನೋಡಿದರು, ಆಲಿಸಿದರು.

(ಅನಂತರ ಹುಝೂರ್ ಅಯ್ಯದಹುಲ್ಲಾಹು ತಆಲ ಬಿನಸ್‌ರಿಹಿಲ್ ಅಝೀಝ್ ಲೋಕದಾದ್ಯಂತವಿರುವ ವಿವಿಧ ಮಹನೀಯರ ಮತ್ತು ಮಹಿಳೆಯರ ಅನಿಸಿಕೆಗಳನ್ನು ವಿವರಿಸಿದರು).

ಒಬ್ಬ ಅಹ್ಮದಿಯೇತರ ಜಪಾನಿ ವ್ಯಕ್ತಿ ಮುಶೀಮಾ ಓಸಾಮೂ (ಹುಝೂರ್ ಜಪಾನನ್ನು ಸಂದರ್ಶಿಸಿದಾಗ ಆತಿಥೇಯರೂ ಆಗಿದ್ದರು.) ಅವರು ಹೇಳಿದರು: ಈ ದಿನ ಅಗಸ್ಟ್ ದಿನಾಂಕ 6ರಂದು ಖುತ್‌ಬ ಆಲಿಸಿದಾಗ ಅಹ್ಮದಿಯಾ ಜಮಾಅತ್ ಜಪಾನಿಗೆ ಸಲ್ಲಿಸಿದ ಸೇವೆ ನನ್ನ ನೆನಪಿಗೆ ಬಂತು. ಇಂದಿನ ಜಲ್ಸದ ಪರಿಸರ ಮತ್ತು ಲೋಕದ ವಿವಿಧ ಸ್ಥಳಗಳಲ್ಲಿ ಜನರು ಜಮಾಯಿಸಿದುದನ್ನು ಕಂಡಾಗ ನನ್ನ ಹೃದಯದಲ್ಲಿ ಈ ಭಾವನೆ ಪ್ರಕಟವಾಯಿತು. ಲೋಕವನ್ನು ಒಂದು ವೇದಿಕೆಯಲ್ಲಿ ಒಗ್ಗೂಡಿಸಲು ಮತ್ತು ಶಾಂತಿ ಮತ್ತು ಸಂರಕ್ಷಣೆಗೋಸ್ಕರ ಅಹ್ಮದಿಯಾ ಜಮಾಅತಿನ ವರ್ತನೆ ಎಷ್ಟು ಮಹತ್ವಪೂರ್ಣವಾಗಿದೆ ಎಂದು.

ಝಾಂಬಿಯದ ಒಬ್ಬ ಕ್ರೈಸ್ತ ಅಧ್ಯಾಪಕ ಜಲ್ಸದ ಕಾರ್ಯಕ್ರಮಗಳನ್ನು ಆಲಿಸಿ ಹೇಳಿದರು: ಇಸ್ಲಾಮ್ ಮಾತ್ರ ಒಂದು ಸತ್ಯಧರ್ಮ ಎಂದು ಇಂದು ನನಗೆ ಮನವರಿಕೆಯಾಯಿತು. ಅದೇ ರೀತಿ ನೈಜೀರಿಯಾದ ಒಬ್ಬ ಅಹ್ಮದಿಯೇತರ ವ್ಯಕ್ತಿ ಬಿರುಸಾದ ಮಳೆಯಲ್ಲಿ ಸ್ವಯಂ ಸೇವಕರು ಕೆಲಸಗಳಲ್ಲಿ ಮಗ್ನರಾಗಿರುವುದನ್ನು ಕಂಡು ಹೇಳಿದರು: ನಿಶ್ಚಯವಾಗಿಯೂ ಈ ಜಮಾಅತ್ ಸತ್ಯವಂತರ ಜಮಾಅತ್ ಆಗಿದೆ.

ಝಾಂಬಿಯದ ಮಸಾಕದ ಒಬ್ಬ ಅಹ್ಮದಿಯೇತರ ಉಸ್ತಾದ್ ಹೇಳಿದರು: ಇಂದು ನಾನು ನಿಮ್ಮ ಖಲೀಫರಿಂದ ಒಂದು ವಿಷಯವನ್ನು ಕಲಿತೆನು. ಮಹಿಳೆಯರ ಹಕ್ಕುಗಳ ಬಗ್ಗೆ ಒತ್ತಿ ಹೇಳುವ ಏಕಮಾತ್ರ ಧರ್ಮ ಇಸ್ಲಾಮ್ ಆಗಿದೆ ಎಂದು. ನೈಜೀರಿಯಾದಲ್ಲಿ ಒಬ್ಬ ಅಹ್ಮದಿಯೇತರ ಅತಿಥಿ ಮರ್‌ಯಮ್ ಹೇಳಿದರು: ಮಹಿಳೆಯರ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಯಾವುವು ಎಂಬುದರ ಬಗ್ಗೆ ವಾಸ್ತವಿಕ ಅರಿವು ಇಂದು ನನಗೆ ಲಭಿಸಿದುವು. ಅವರು ಬರೆಯುತ್ತಾರೆ: ಅಹ್ಮದಿಯರ ಕೃತ್ಯಗಳು ಅವರ ಮಾತುಗಳಿಗೆ ಅನುಸಾರವಾಗಿದ್ದರೆ ನಿಮಗಿಂತ ಉತ್ತಮರಾದವರನ್ನು ನಾನು ಕಂಡಿಲ್ಲ.

(ಹುಝೂರ್ ಹೇಳಿದರು:) ಪ್ರತಿಯೊಬ್ಬ ಅಹ್ಮದಿ ತನ್ನ ಮನೆಗಳಲ್ಲಿ ಇಸ್ಲಾಮೀ ಉಪದೇಶಗಳ ಉದಾಹರಣೆ ತೋರಿಸಬೇಕು. ಆ ಮೂಲಕ ಇಸ್ಲಾಮಿನ ನೈಜ ತತ್ವಗಳ ಪ್ರಭಾವ ಜನರಲ್ಲಿ ಸ್ಥಿರವಾಗಿರುವಂತಾಗಬೇಕು. ಅಹ್ಮದಿ ಪುರುಷರು ಚಿಂತಿಸಬೇಕಾಗಿದೆ. ಅವರು ತಮ್ಮ ನಡೆವಳಿಕೆಗಳನ್ನು ಮನೆಗಳಲ್ಲಿ ಸಹ ಚೆನ್ನಾಗಿರಿಸಬೇಕು. ಅವರು ಲೋಕವನ್ನು ವಂಚಿಸಬಾರದು.

ಕ್ಯಾಮರೂನ್ ದೇಶದ ಮರ್‌ವಾ ನಗರದ ಸಮೀಪದ ಒಂದು ಗ್ರಾಮದ ಚೀಫ್ ಅಲ್‌ಹಾಜಿ ಉಸ್ಮಾನ್ ಸಾಹಿಬ್ ಹೇಳಿದರು: ಇಂದು ಜಲ್ಸದ ಕಾರ್ಯಕ್ರಮಗಳನ್ನು ನೋಡಿದಾಗ ನನಗೆ ದೃಢವಿಶ್ವಾಸವಾಯಿತು. ವಾಸ್ತವಿಕವಾಗಿ ಈ ಜಮಾಅತ್ ಇಮಾಮ್ ಮಹ್‌ದಿಯವರ ಜಮಾಅತ್ ಆಗಿದೆ ಎಂದು. ಮಲೇಶಿಯಾದ ಒಬ್ಬ ನವ ಅಹ್ಮದಿ ಹೇಳಿದರು: ಯು.ಕೆ. ಜಲ್ಸ ಸಾಲಾನವನ್ನು ನೋಡಿದ ನಂತರ ನಾನು ಅಲ್ಲಾಹನಿಗೆ ಬಹಳ ಕೃತಜ್ಞತೆ ಅರ್ಪಿಸುತ್ತಿದ್ದೇನೆ. ನಾನು ಯಾವಾಗಲೂ ಖಿಲಾಫತ್‌ನೊಂದಿಗೆ ನಿಷ್ಠೆ ಹೊಂದಿದವನೂ ವಿಧೇಯನೂ ಆಗಿರುವೆನೆಂದು ವಾಗ್ದಾನ ಮಾಡುತ್ತೇನೆ.

ಗಿನಿ ಬಸಾವ್ ದೇಶದ ನವ ಅಹ್ಮದಿಯರು ಮತ್ತು ಅಹ್ಮದಿಯೇತರರು ಜಲ್ಸದ ಕಾರ್ಯಕ್ರಮಗಳನ್ನು ಕಾಣುವ ಸಲುವಾಗಿ ಹದಿನೆಂಟು ಮತ್ತು ಮೂವತ್ತು ಕಿಲೋಮೀಟರ್ ದೂರವನ್ನು ಸೈಕಲ್ ಸವಾರಿ ಮಾಡುತ್ತಾ ಅಥವಾ ಪಾದಚಾರಿಗಳಾಗಿ ತಲಪಿದರು. ಆ ಸಂದರ್ಭದಲ್ಲಿ 127 ಜನರು ಬೈಅತ್ ಮಾಡಿದರು.

ಕಾಂಗೋದ ಒಬ್ಬ ಕ್ರೈಸ್ತ ಮಿತ್ರ ತನ್ನ ಪತ್ನಿಯೊಂದಿಗೆ ಹೇಳಿದರು: ಇಲ್ಲಿ ಮೂರು ದಿನಗಳ ಕಾಲ ನಾವು ಕಲಿತುದನ್ನು ಕ್ರೈಸ್ತರಾಗಿ ಜೀವಿಸಿ ಇಷ್ಟರವರೆಗೆ ಸಹ ಕಲಿತುಕೊಳ್ಳಲು ಸಾಧ್ಯವಾಗಲಿಲ್ಲ.

ಗಿನಿ ಬಸಾವ್ ದೇಶದ ಒಬ್ಬ ಅಹ್ಮದಿಯೇತರ ವ್ಯಕ್ತಿ ಹೇಳಿದರು: ಇಸ್ಲಾಮಿಗೆ ಈಗ ಒಬ್ಬ ನೇತಾರರ ಆವಶ್ಯಕತೆ ಇದೆ. ಆ ನೇತಾರ ಅಹ್ಮದಿಯಾ ಜಮಾಅತಿನಲ್ಲಿ ಖಲೀಫರಾಗಿ ಶೋಭಿಸುತ್ತಿದ್ದಾರೆ. ಆ ವ್ಯಕ್ತಿ ಜಲ್ಸ ಮುಕ್ತಾಯಗೊಂಡಾಗ ಬೈಅತ್ ಮಾಡಿ ಅಹ್ಮದಿಯರಾದರು.

ಯಮನ್ ದೇಶದ ಅಕ್ರಮ್ ಅಲಿ ಸಾಹಿಬ್ ಹೇಳಿದರು: ಲಜ್‌ನವನ್ನು ಸಂಬೋಧಿಸಿ ಖಲೀಫರು ಮಾಡಿದ ಭಾಷಣವನ್ನು ಆಲಿಸಿ ಎಲ್ಲಾ ಸಮಾಜದವರು ಅದನ್ನು ಕೃತಿರೂಪಕ್ಕೆ ಇಳಿಸುವುದಾದರೆ ಸಮಾಜ ಶೇಕಡಾ ನೂರರಷ್ಟು ಸುಧಾರಿಸಲ್ಪಡುವುದು.

(ಹುಝೂರ್ ಅಯ್ಯದಹುಲ್ಲಾಹು ತಆಲ ಬಿನಸ್‌ರಿಲ್ ಅಝೀಝ್ ಅವರು ನೈಜರ್, ಝಾಂಬಿಯಾ, ಗೆಬೋನ್, ನೈಜೀರಿಯಾ, ಗಿನಿಕನಾಕರಿ, ಕ್ಯಾಮರೂನ್, ಮಾಲಿ, ತೆನ್‌ಝಾನಿಯಾ, ಮಲೇಶಿಯಾ, ಬ್ರೆಜಿಲ್, ಗಿನಿ ಬಸಾವ್, ಗಿಯಾನ, ಮೌರಿಶಸ್, ಆಸ್ಟ್ರೇಲಿಯಾ, ಐವರಿಕೋಸ್ಟ್, ಕಾಂಗೋ, ಬ್ರಾಝ್‌ವೇಲ್, ಸೆನೆಗಲ್, ಯಮನ್, ಜೋರ್ದಾನ್, ಸಿರಿಯಾ, ಜರ್ಮನಿ, ಇಂಡೋನೇಶಿಯಾ, ಕಿರ್‌ಗಿಸ್ಥಾನ್, ಆಸ್ಟ್ರೇಲಿಯಾ,

ಗ್ವಾಟೆಮಾಲ, ಅಲ್‌ಬಾನಿಯಾ ಮೊದಲಾದ ದೇಶಗಳ ಅಹ್ಮದಿ ಪುರುಷರ ಮತ್ತು ಸ್ತ್ರೀಯರ ಹಾಗೂ ಅಹ್ಮದಿಯೇತರರ ವಿವಿಧ ಅನಿಸಿಕೆಗಳನ್ನು ವಿವರಿಸಿದರು. ಲೋಕದ ವಿವಿಧ ಭೂಖಂಡಗಳ ನಿವಾಸಿಗಳಾದ, ವಿವಿಧ ವರ್ಣಗಳ ಮತ್ತು ವಂಶಗಳ ಜನರು, ವಿವಿಧ ಭಾಷೆಗಳನ್ನಾಡುವ ಪುರುಷರೂ ಮಹಿಳೆಯರೂ ಜಲ್ಸದ ಸುವ್ಯವಸ್ಥೆ, ಆಧ್ಯಾತ್ಮಿಕ ಪರಿಸರ ಮತ್ತು ಹುಝೂರರ ಜ್ಞಾನ ಭರಿತ ಪ್ರಭಾವಶಾಲಿ ಭಾಷಣಗಳಿಂದ ಲಾಭ ಪಡೆದ ಬಗ್ಗೆ ವಿವರಿಸಿದರು. ಜಲ್ಸದಲ್ಲಿ ಭಾಗವಹಿಸಿದ ನಂತರ ಬೈಅತ್ ಮಾಡಿದ ಕೆಲವರ ಕೆಲವು ವಿಶ್ವಾಸವರ್ಧಕ ಘಟನೆಗಳನ್ನು ಸಹ ವಿವರಿಸಿದರು.)

ಜಲ್ಸ ಸಾಲಾನದ ಸಂದರ್ಭದಲ್ಲಿ ಯು.ಕೆ. ಪ್ರಧಾನ ಮಂತ್ರಿ ಕೆನಡದ ಪ್ರಧಾನಮಂತ್ರಿ ಸಮೇತ ವಿವಿಧ ಸಚಿವರು ಮತ್ತು ರಾಜಕೀಯ ನಾಯಕರಿಂದ ಶುಭಾಶಯ ಕೋರುವ ಸಂದೇಶಗಳು ಲಭಿಸಿದುವು. ಬ್ರಿಟನ್‌ನಿಂದಲ್ಲದೆ ಒಂಬತ್ತು ದೇಶಗಳಿಂದ 109 ಸಂದೇಶಗಳು ಲಭಿಸಿದುವು. ಆ ದೇಶಗಳಲ್ಲಿ ಅಮೇರಿಕ, ಸಿಯೆರ್ರಾಲಿಯೋನ್, ಗ್ಯಾಂಬಿಯಾ, ಸೆನೆಗಲ್, ಕೆನ್ಯ, ಸ್ಪೈನ್, ಹಾಲೇಂಡ್, ಜರ್ಮನಿ ಸೇರಿವೆ.

ಅಲ್ಲಾಹನ ಅನುಗ್ರಹದಿಂದ ಎಂ.ಟಿ.ಎ. ಆಫ್ರಿಕದೊಂದಿಗೆ ಬೇರೆ ಸ್ಥಳೀಯ ಟಿವಿ ಚ್ಯಾನಲ್‌ಗಳು ಸಹ ಜಲ್ಸದ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದುವು. ಆಫ್ರಿಕದಲ್ಲಿ ಐವತ್ತು ಮಿಲಿಯಕ್ಕಿಂತ ಹೆಚ್ಚು ಜನರು ಮಾತನಾಡುವ ಬಾವುಸಾ ಭಾಷೆಯಲ್ಲಿ ಪ್ರಥಮ ಸಾರಿ ಭಾಷಾಂತರ ಮಾಡಿ ಪ್ರಸಾರ ಮಾಡಲಾಯಿತು. ಆಫ್ರಿಕದಲ್ಲಿ 16 ಟಿ.ವಿ. ಚ್ಯಾನಲ್‌ಗಳು ಜಲ್ಸದ ಸಮಾಚಾರ ನೀಡಿದುವು. ಬಿ.ಬಿ.ಸಿ. ಸೌಥ್ ಜಲ್ಸದ ಬಗ್ಗೆ ಡೊಕ್ಯೂಮೆಂಟರಿ ಪ್ರಸಾರ ಮಾಡಿತು. ಬಿ.ಬಿ.ಸಿ. ವರ್ಲ್ಡ್ ಜಲ್ಸದ ಸಮಾಚಾರ ನೀಡಿತು. ನಲ್ವತ್ತು ವೆಬ್‌ಸೈಟ್‌ಗಳು ಜಲ್ಸದ ಸಮಾಚಾರ ನೀಡಿದುವು. ಜಲ್ಸದ ಬಗ್ಗೆ 16 ರೇಡಿಯೋ ಕಾರ್ಯಕ್ರಮಗಳು ಬಿತ್ತರಿಸಲ್ಪಟ್ಟವು. 20 ಪತ್ರಿಕೆಗಳಲ್ಲಿ ಲೇಖನ ಮೊದಲಾದವುಗಳು ಪ್ರಕಟವಾದುವು. 12 ಟಿ.ವಿ. ಚ್ಯಾನಲ್‌ಗಳು ಜಲ್ಸದ ಬಗ್ಗೆ ವರದಿ ನೀಡಿದುವು. ಇವಲ್ಲದೆ ಸೋಶಿಯಲ್ ಮೀಡಿಯಾ ಮೂಲಕ ಅಂದಾಜು 63 ಲಕ್ಷ ಜನರಿಗೆ ಸಂದೇಶ ತಲಪಿದುವು. ಬಂಗ್ಲಾದೇಶದಲ್ಲಿ ಹತ್ತು ಆನ್‌ಲೈನ್ ಪೋರ್ಟಲ್‌ಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಜಲ್ಸದ ಸಮಾಚಾರಗಳು ಚಿತ್ರಗಳೊಂದಿಗೆ ಪ್ರಕಟವಾದುವು. ಯೂಟ್ಯೂಬ್‌ನಲ್ಲಿ ಹದಿನೈದು ಮಿಲಿಯಕ್ಕಿಂತ ಹೆಚ್ಚಿನ ಜನರು ವಿಸಿಟ್ ಮಾಡಿದರು. ಇನ್‌ಸ್ಟಾಗ್ರಾಮ್‌ನಲ್ಲಿ ಮೂವತ್ತೈದು ಸಾವಿರ ಜನರು ಎಂ.ಟಿ.ಎ.ದ ಪೇಜ್ ನೋಡಿದರು. 1.97 ಮಿಲಿಯ ಜನರಿಗೆ ಆ ಮೂಲಕ ಸಂದೇಶ ತಲಪಿತು. ಟ್ವಿಟರ್‌ನಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಎಂ.ಟಿ.ಎ.ದ ಪೇಜ್ ನೋಡಿದರು. ಫೇಸ್‌ಬುಕ್ ಮೂಲಕ 5.5 ಲಕ್ಷ ಜನರಿಗೆ ಸಂದೇಶ ತಲಪಿತು. ಎಂ.ಟಿ.ಎ.ದ ಸ್ವಂತ ವೆಬ್‌ಸೈಟನ್ನು ಒಂದು ಲಕ್ಷ ಸಾರಿ ನೋಡಲಾಯಿತು. ಎಂ.ಟಿ.ಎ. ಆನ್ ಡಿಮ್ಯಾಂಡ್ ಮೂಲಕ 2 ಲಕ್ಷಕ್ಕಿಂತ ಹೆಚ್ಚು ಜನರು ಜಲ್ಸವನ್ನು ವೀಕ್ಷಿಸಿದರು.

(ಖುತ್‌ಬದ ಕೊನೆಗೆ ಹುಝೂರ್ ಪ್ರಾರ್ಥಿಸಿದರು.) ಅಲ್ಲಾಹನು ಈ ಜಲ್ಸದ ದೂರಗಾಮಿ ಪರಿಣಾಮಗಳನ್ನು ಉಂಟುಮಾಡುವವನಾಗಲಿ. ಸಾತ್ವಿಕ ಆತ್ಮಗಳನ್ನು ಹೊಂದಿದ ಜನರು ಅಹ್ಮದಿಯ್ಯತ್ ಎಂಬ ನೈಜ ಇಸ್ಲಾಮ್ ಕಡೆಗೆ ಮೊದಲಿಗಿಂತ ಮಿಗಿಲಾಗಿ ಗಮನಿಸುವವರಾಗಲಿ. ಅಲ್ಲಾಹನು ಮೌಲವಿ ನಾಮದೇಯರ ಕೆಡುಕುಗಳಿಂದ ಜಮಾಅತನ್ನು ಮತ್ತು ಎಲ್ಲಾ ಸಾತ್ವಿಕರನ್ನೂ ಸಂರಕ್ಷಿಸುವವನಾಗಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ○ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)
*At, Masjid Mubarak, Islamabad, Tilford, UK, On 13-08-2021*
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian


***Email***: *khutuba.kannada@gmail.com*


**You can find all the Sermons archived at**: www.alislam.org/friday-sermon